# ಅಂಗೈಯಲ್ಲಿ ಅರಮನೆ

## ಮರಣ ಪ್ರಮಾಣ ಪತ್ರ



ಸುಮಾರು ವರ್ಷಗಳ ಹಿಂದಿನ ಮಾತು. ನಮ್ಮ ತಾಯಿ ಮರಣಾನಂತರ ಅವರ ಮರಣ ಪ್ರಮಾಣ ಪತ್ರಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದೆ. ಹತ್ತು ದಿನಗಳಾದ ಮೇಲೆ ವಿಚಾರಿಸಿದಾಗ, ಇನ್ನೂ ಸಿದ್ಧವಾಗಿಲ್ಲವೆಂದು ಉತ್ತರಬಂತು. ಬೇಸತ್ತು ಮೇಲ್ವಿಚಾರಕರಿಗೆ ವಿಷಯ ತಿಳಿಸಿದಾಗ, ಅವರು ಅನುಕಂಪ ತೋರಿ ಹೊಸ ಅರ್ಜಿಯನ್ನು ಪಡೆದು ಮರುದಿನ ಬಂದು ಪ್ರಮಾಣಪತ್ರವನ್ನು ಪಡೆಯಬಹುದು ಎಂದು ಹೇಳಿದರು. ಮಾರನೇ ದಿವಸ ನಾನು ಪಾಲಿಕೆ ಕಚೇರಿಗೆ ಹೋದಾಗ ಅವರು, 'ನಿಮ್ಮ ಮರಣ ಪ್ರಮಾಣ ಪತ್ರ ಸಿದ್ಧವಾಗಿದೆ. ನೋಡಿ, ಕಲೆಕ್ಟ್ ಮಾಡಿಕೊಳ್ಳಿ' ಎಂದರು. ನನಗಷ್ಟೇ ಅಲ್ಲ, ಅಲ್ಲಿದ್ದ ಇತರರಿಗೂ ಸ್ವಲ್ಪ ಬೇಸರ, ಸ್ವಲ್ಪ ತಮಾಷೆ ಎನಿಸಿತು. ನಾನಿನ್ನೂ ಜೀವಂತವಾಗಿರುವಾಗಲೇ ನನ್ನ ಮರಣ ಪತ್ರ ತಯಾರಾಯಿತೇ ಎಂದು.

**ಟಿ.ಎಲ್. ರಾಮಕೃಷ್ಣ**

---



## ಕಾಕಾ ಕಿಕೀ

ಒಂದಿನ ನಾವು ನಮ್ಮ ನೆಂಟರ ಮನೆಗೆ ಹೋಗಿದ್ದೆವು. ಪ್ರೈಮರಿ ಶಾಲೆ ಓದುತ್ತಿರುವ ಅವರ ಮಗಳು ನವಮಿ, ಕ ಕಾ ಕಿ ಕೀ ಕು ಕೂ... ಓದು ಸಾಗಿತ್ತು. ನಮ್ಮನ್ನು ಕಂಡು ಪ್ರಶ್ನಾರ್ಥಕ ನೋಟ ಬೀರಿದಳು. ಅವರ ಅಮ್ಮ; "ಕಾಕ, ಕಾಕಿ (ಚಿಕ್ಕಪ್ಪ,ಚಿಕ್ಕಮ್ಮ) ಬಂದಾರ ನೋಡು" ಎಂದು ಅವಳ ಬಳಿ ಹೇಳಿದರು. ಜೊತೆಗೆ ನನ್ನಾಕೆಯ ತಂಗಿಯೂ ನಮ್ಮೊಂದಿಗೆ ಇದ್ದರು. ಕಾಗುಣಿತದ ಗುಂಗಿನಲ್ಲಿದ್ದ ಚೂಟಿ ನವಮಿ, "ಹಾಗಾದ್ರೆ ಇವರು? ಕಿ ಕೀ ನಾ?" ಎಂದು ನಾದಿನಿಯ ಕಡೆ ನೋಡಿದಳು. ಅವಳ ಕಾಗುಣಿತದ ಪ್ರಭಾವ ನಗುತರಿಸಿತು!

**ನಗರ ಗುರುದೇವ್ ಭಂಡಾರ್ಕರ್**